## ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

**ಸಿ.ಸಿ. ನಂ.631/2025**

| | | |
|---|---|---|
| ಸಾಕ್ಷಿದಾರರ ಹೆಸರು | ವಿಕಾಸ್ | ಸಿ.ಡಬ್ಲ್ಯು–5 |
| ತಂದೆಯ ಹೆಸರು | ಮಂಜುನಾಥ | ಪಿ .ಡಬ್ಲ್ಯೂ–5 |
| ವಯಸ್ಸು | 20 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಎಲೆಕ್ಟ್ರಿಷಿಯನ್ | ದಿನಾಂಕಃ |
| ವಾಸಃ | ಸಾಗರ | 09.06.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ಚಾ.ಸಾ 1 ರಿಂದ 4 ಗೊತ್ತು. ನಿಪಿ–2 ಮತ್ತು 3 ರಲ್ಲಿನ ತನ್ನ ಸಹಿಗಳನ್ನು ಸಾಕ್ಷಿಯು ಗುರುತಿಸಿದ್ದರಿಂದ ಸದರಿ ಸಹಿಗಳನ್ನು ನಿಪಿ–2(ಬಿ) ಮತ್ತು ನಿಪಿ–3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–4 ರ ಫೋಟೋದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

**2.** ದಿನಾಂಕ 27.02.2025 ರಂದು ಚಾ.ಸಾ 1 ರವರ ಮನೆಯಲ್ಲಿ ನಾನು ಕೆಲಸ ಮಾಡುತ್ತಿದ್ದಾಗ ಸಾಗರ ಟೌನ್ ಪೋಲಿಸರು ಪಂಚನಾಮೆಗೆ ಬಂದಿದ್ದರು. ಆ ಸಮಯದಲ್ಲಿ ನಾನುನಿಪಿ–2 ಮತ್ತು 3 ರ ದಾಖಲೆಗೆ ಸಹಿ ಮಾಡಿದ್ದೇನೆ. ಸದರಿ ಕಾಲಕ್ಕೆ ಪೋಲಿಸರು ನಕ್ಷೆ ತಯಾರಿಸಿ, ಫೋಟೋ ತೆಗೆದರು. ನನ್ನೊಂದಿಗೆ ಚಾ.ಸಾ 4 ರವರು ಇದ್ದು, ಚಾ.ಸಾ 1 ರವರಿಗೆ ಪೋಲಿಸರಿಗೆ ಸ್ಥಳವನ್ನು ತೋರಿಸಿದರು.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ.ಕೆ.ಎಸ್.ಎ.ಆರ್ ರವರಿಂದಃ–**

**1.** ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮುಂದುವರೆದು ಗಲಾಟೆ ವಿಚಾರವನ್ನು ಅದರಲ್ಲಿ ಬರೆದಿದ್ದಾರೆ ಎಂದು ನುಡಿಯುತ್ತಾರೆ. ಪಂಚನಾಮೆ ಕಾಲಕ್ಕೆ ಪೋಲಿಸರು ನನಗೆ ನೋಟೀಸ್ ಅನ್ನು ನೀಡಿಲ್ಲ. ದಿನಾಂಕ 27.02.2025 ರಂದು ಪಂಚನಾಮೆಯನ್ನು ಪೋಲಿಸರು ಮಾಡಿದರು. ಪಂಚನಾಮೆ ಕಾಲಕ್ಕೆ ಪೋಲಿಸರು ಸೇರಿದಂತೆ ಸುಮಾರು 6–7 ಜನ ಸ್ಥಳದಲ್ಲಿ ಇದ್ದರು. ಪಂಚನಾಮೆಯನ್ನು ಬೆಳಿಗ್ಗೆ 10.00–10.30

ಗಂಟೆಯವರೆಗೆ ಮಾಡಿರಬಹುದು. ನಿಪಿ–3 ಅನ್ನು ನನ್ನ ಸಮಕ್ಷಮದಲ್ಲಿಯೇ ಪೋಲಿಸರು ಬರೆದರು. ಪಂಚನಾಮೆ ಮಾಡಿದ ಸ್ಥಳದ ಚಕ್ಕು ಬಂದಿ ಹೇಳಲು ಆಗುವುದಿಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.